# ಮಹಿಳಾ ಬ್ಯಾಂಕಿಂಗ್ ನಲ್ಲಿ ತ್ರಿವಿಕ್ರಮ ಹೆಜ್ಜೆ

ಸಮಾಜದ ವಿವಿಧ ಸ್ತರಗಳಲ್ಲಿರುವ ಮಹಿಳೆಯರ ಕಲ್ಯಾಣ ಹಾಗೂ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಆರ್ಥಿಕ ಯೋಜನೆಗಳು ತನ್ಮೂಲಕ ಅವರ ಜೀವನಮಟ್ಟವನ್ನು ಸುಧಾರಿಸುವ ಮುಲೋದ್ದೇಶಗಳಿಂದ ಪ್ರಾರಂಭವಾದ ಬೆಂಗಳೂರಿನ ಮಹಿಳಾ–ಕೊ–ಆಪರೇಟಿವ್ ಬ್ಯಾಂಕ್ ಇಂದು ತನ್ನ ಎರಡನೆಯ ಶಾಖೆಯ ಪ್ರಾರಂಭದೊಂದಿಗೆ ಮಹಿಳಾ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತ್ರಿವಿಕ್ರಮ ಹೆಜ್ಜೆಯನ್ನುಡುತ್ತಿದೆ. ೧೯೭೯ರಲ್ಲಿ ಪ್ರಾರಂಭವಾದ 'ದಿ ಮಹಿಳಾ ಕೋಆಪರೇಟಿವ್ ಬ್ಯಾಂಕ್' 'ಮಹಿಳೆಯರಿಗಾಗಿಯೇ – ಮಹಿಳೆಯರಿಂದಲೇ' ಪ್ರಾರಂಭವಾದ ಕರ್ನಾಟಕದ ಪ್ರಪ್ರಥಮ ಬ್ಯಾಂಕ್ ಎಂಬ ಹಿರಿಮೆಯನ್ನು ಗಳಿಸಿದೆ. ರಾಜ್ಯದಲ್ಲಿ ಸದ್ಯಕ್ಕೆ ನಾಲ್ಕು ಮಹಿಳಾ ಸಹಕಾರಿ ಬ್ಯಾಂಕಗಳಿದ್ದು, ಬೆಂಗಳೂರಿನ ಮಹಿಳಾ–ಕೋ–ಆಪರೇಟಿವ್ ಬ್ಯಾಂಕ್ ಇನ್ನಿತರ ಮೂರು ಬ್ಯಾಂಕುಗಳೆಂದರೆ ಬೆಳಗಾವಿಯ ಜೀಜಾಮಾತಾ ಮಹಿಳಾ ಸಹಕಾರಿ ಬ್ಯಾಂಕ್, ತುಮಕೂರಿನ ಶ್ರೀಶಾರದಾ ಮಹಿಳಾ ಸಹಕಾರಿ ಬ್ಯಾಂಕ್ ಹಾಗೂ ಇತ್ತೀಚೆಗೆ ಸ್ಥಾಪನೆಗೆ ಅನುಮತಿಯನ್ನು ಪಡೆದಿರುವ ಚಿತ್ರದುರ್ಗದ ಒನಕೆ ಓಬವ್ವ ಮಹಿಳಾ ಸಹಕಾರಿ ಬ್ಯಾಂಕ್.

ಮಲ್ಲೇಶ್ವರಂನ ನಾಗರೀಕ ಸಮಿತಿಯ ಕೆಲವು ಪ್ರಮುಖ ಸದಸ್ಯರಾದ ಮಾಜಿ ಶಾಸಕ ಪಿ.ರಾಂದೇವ್, ಕೆ.ನರಸಿಂಹ ಶೆಟ್ಟಿ, ಡಾ. ಪಿ.ಎಸ್.ವಿ ಶೆಟ್ಟಿ, ಡಾ.ಲಕ್ಕೇಗೌಡ ಮತ್ತು ಲೇ.ಕೈಲಾಶನಾಥ ಮಿಶ್ರಾ ಇವರುಗಳ ದೂರದೃಷ್ಟಿ ಹಾಗೂ ಸಾಮಾಜಿಕ ಕಳಕಳಿಯಿಂದ ದಿ ಮಹಿಳಾ ಸಹಕಾರಿ ಬ್ಯಾಂಕ್ ಪ್ರಾರಂಭವಾಯಿತು. ಖ್ಯಾತ ಬರಹಗಾರ್ತಿ ಹಾಗೂ ಬ್ಯಾಂಕಿನ ಮೊದಲ ಅಧ್ಯಕ್ಷರಾದ ಶ್ರೀಮತಿ ಎ.ಪಂಕಜ, ಶ್ರೀಮತಿ ಪಿ.ವಿ.ಪಾರ್ವತಿ ಮತ್ತು ಶ್ರೀಮತಿ ಎನ್.ವಿಲಾಸಿನಿ ಇವರುಗಳ ಕಠಿಣ ಪರಿಶ್ರಮದಿಂದ ಮಹಿಳೆಯಿರಿಂದಲೇ ಪ್ರಾರಂಭವಾಗಿ ಮಹಿಳೆಯರಿಗಾಗಿಯೇ ಕ್ರಮಿಸುವ, ಮಹಿಳೆಯರದೇ ಆಡಳಿತವಿರುವ ಈ ಬ್ಯಾಂಕ್ ಇಂದು ನಗರಾದ್ಯಂತ ಯಶಸ್ವಿ ಬ್ಯಾಂಕ್ ಎಂದು ಹೆಸರುವಾಸಿಯಾಗಿದೆ. ಕರ್ನಾಟಕ ಸರ್ಕಾರದ ಸಹಕಾರ ಇಲಾಖೆ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ರಚನಾತ್ಮಕ ಸಹಕಾರದ ಸುಯೋಗದ ಫಲವಾಗಿ ಬ್ಯಾಂಕಿನ ಕೇಂದ್ರ ಕಛೇರಿಯು ಶೇಷಾದ್ರಿಪುರಂನಲ್ಲಿ ತನ್ನದೇ ಆದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೯೨ರ ನವೆಂಬರ್ ತಿಂಗಳಿನಲ್ಲಿ ನಗರದ ಬಸವೇಶ್ವರ ನಗರದಲ್ಲಿ ತನ್ನ ಪ್ರಥಮ ಶಾಖೆಯನ್ನು ಪ್ರಾರಂಭಿಸಿತು.

೧೯೭೯ರಲ್ಲಿ ಕೇವಲ ಹತ್ತಾರು ಉತ್ಸಾಹಿ ಮಹಿಳಾ ಸದಸ್ಯರಿಂದ ಪ್ರಾರಂಭವಾದ ಈ ಬ್ಯಾಂಕ್ ಇಂದು ೪೦.೬೪ ಲಕ್ಷ ರೂ.ಗಳ ಶೇರು ಬಂಡವಾಳವನ್ನು ಹೊಂದಿದ್ದು ಸುಮಾರು ೫ ಕೋಟಿ ರೂ.ಗಳ ಒಟ್ಟು ವಹಿವಾಟವನ್ನು ಹೊಂದಿದೆ. ೩೧–೧೦–೯೩ರ ಅಂಕಿ ಅಂಶಗಳ ಅನ್ವಯ ಬ್ಯಾಂಕಿನ ಒಟ್ಟು ಸದಸ್ಯರ ಸಂಖೆ ೪೮೯೪ ಮುಟ್ಟಿದೆ. ಈವರೆಗೆ ಮೂರು ಕೋಟಿ ಇಪ್ಪತ್ತೈದು ಲಕ್ಷ ರೂ.ಗಳ ವಿವಿಧ ಸಾಲಗಳನ್ನು ಮಹಿಳಾ ಅಭಿವೃದ್ಧಿಗಾಗಿ ನೀಡಿದೆ. ಮಹಿಳಾ ಬ್ಯಾಂಕ್ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ತನ್ನ ಸದಸ್ಯರಿಗೆ ನೀಡುತ್ತದೆ. ಇವುಗಳಲ್ಲಿ ಜಮೀನು ಸಾಲ, ಆದ್ಯತಾವಲಯದ ಸಾಲ, ಚಿನ್ನಾಭರಣ ಸಾಲ, ಬೆಳ್ಳಿ ಸಾಲ, ಸ್ಥಿರಾಸ್ತಿ ಸಾಲ ಹಾಗೂ ದ್ವಿಚಕ್ರ–ತ್ರಿಚಕ್ರ ವಾಹನಗಳ ಸಾಲಗಳು ಪ್ರಮುಖವಾದವು. ಬ್ಯಾಂಕಿನ ಸಾಲ ಸೌಲಭ್ಯಗಳಿಂದ ನಿಟ್ಟಿಂಗ್, ಯಂತ್ರಗಳ ಖರೀದಿ, ಸೀಮೆ ಎಣ್ಣೆ ವ್ಯಾಪಾರ, ವಿದ್ಯಾಭ್ಯಾಸ ಮುಂತಾದ ಅನೇಕ ಕಾರ್ಯಗಳು ಯಶಸ್ವಿಯಾಗಿವೆ.

ಬ್ಯಾಂಕಿನ ಸಾಲ ಸೌಲಭಗಳೇ ಅಲ್ಲದೇ ಅನೇಕ ಠೇವಣಿ ಯೋಜನೆಗಳನ್ನೂ ಹೊಂದಿದೆ. ಮಹಿಳಾ ನಿಧಿ ಠೇವಣಿ, ಅಮೃತ ನಿಧಿ ಠೇವಣಿ, ಅಣುನಿಧಿ, ಮಕ್ಕಳ ಉಳಿತಾಯ ಖಾತೆ ಹಾಗೂ ಭವಿಷ್ಯನಿಧಿಗಳು ಇಂದು ಜನತೆಯಲ್ಲಿ ಉಳಿತಾಯ ಮನೋಭಾವವನ್ನು ಪ್ರದೀಪ್ತಗೊಳಿಸಿವೆ. ಬ್ಯಾಂಕಿನ ಆಡಳಿತವನ್ನು, ಚುನಾಯಿತ

ಆಡಳಿತ ಮಂಡಳಿಯು ನಿರ್ವಹಿಸುತ್ತದೆ. ಆಡಳಿತ ಮಂಡಳಿಯು ೧೧ ಸದಸ್ಯರನ್ನು ಹೊಂದಿದ್ದು, ಇವುಗಳಲ್ಲಿ ಮೂವರು ಪುರುಷರು ಹಾಗೂ ಒಬ್ಬ ಪರಿಶಿಷ್ಟಜಾತಿ, ಪಂಗಡಗಳಿಗೆ ಸೇರಿದ ಸದಸ್ಯರಿದ್ದಾರೆ. ಪ್ರಸ್ತುತ ಆಡಳಿತ ಮಂಡಳಿಯ ಸದಸ್ಯರೆಂದರೆ, ಶ್ರೀಮತಿ ಜಿ.ಸಿ.ರಾಜಮ್ಮ ಅಧ್ಯಕ್ಷರು, ಶ್ರೀಮತಿ ಎನ್.ಜಯಲಕ್ಷ್ಮಿ ಉಪಾಧ್ಯಕ್ಷರು, ಶ್ರೀಮತಿ ಗಂಗಮ್ಮ ಖಜಾಂಚಿ, ಶ್ರೀಮತಿ ಎನ್.ವಿಲಾಸಿನಿ ನಿರ್ದೇಶಕರು, ಶ್ರೀಮತಿ ಎ.ಆರ್.ಕಲ್ಪನಾ ನಿರ್ದೇಶಕರು, ಶ್ರೀಮತಿ ಡಿ.ವಿ. ಶಾಂತಾಮಣಿ ನಿರ್ದೇಶಕರು, ಶ್ರೀಮತಿ ಪಿ.ವಿ.ಪಾರ್ವತಿ ನಿರ್ದೇಶಕರು, ಶ್ರೀಮತಿ ಲಲಿತಾರಾಜ್ ನಿರ್ದೇಶಕರು, ( ಪರಿಶಿಷ್ಟ ಜಾತಿ, ಪಂಗಡ) ಮೀಸಲು ಸ್ಥಾನ. ಶ್ರೀಯುತ ಕೆ.ನರಸಿಂಹ ಶೆಟ್ಟಿ ನಿರ್ದೇಶಕರು, ಶ್ರೀಯುತ ಜಿ.ಕೆ.ರವೀಂದ್ರ ನಿರ್ದೇಶಕರು, ಶ್ರೀಯುತಎನ್.ನಾಗರಾಜ್ ನಿರ್ದೇಶಕರು ಗಂಡಸರಿಗೆ ಮೀಸಲು ಸ್ಥಾನಗಳು.

ಬ್ಯಾಂಕಿನ ಬೆಳವಣಿಗೆಯಿಂದ ಉತ್ತೇಜಿತರಾದ ಆಡಳಿತ ಮಂಡಳಿಯು ಬನಶಂಕರಿ ಪ್ರಥಮ ಹಂತದಲ್ಲಿ ತನ್ನ ದ್ವಿತೀಯ ಶಾಖೆಯನ್ನು ಪ್ರಾರಂಭಿಸುತ್ತಿದೆ. ರಾಜ್ಯ ಸರ್ಕಾರದ ಸಹಕಾರಿ ಖಾತೆಯ ಮಂತ್ರಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ೨೫-೨-೯೪ ರಂದು ೧೦ ಘಂಟೆಗೆ ದ್ವಿತೀಯ ಶಾಖೆಯ ಉದ್ಘಾತನೆಯನ್ನು ನೆರವೇರಿಸಲಿದ್ದಾರೆ. ಜವಳಿ ಖಾತೆಯ ಮಂತ್ರಿ ಹೆಚ್.ಕೆ.ಪಾಟೀಲರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಮಹಿಳಾ ಶಕ್ತಿಯ ಪ್ರತೀಕವಾಗಿರುವ ಮಹಿಳಾ ಸಹಕಾರಿ ಬ್ಯಾಂಕ್, ಮಹಿಳಾ ಕಲ್ಯಾಣಕ್ಕಾಗಿ ಇನ್ನೂ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಬ್ಯಾಂಕಿನ ಆಡಳಿತ ಮಂಡಳಿಯು ಉತ್ಸುಕರಾಗಿದ್ದು, ಬ್ಯಾಂಕಿನ ಸಿಬ್ಬಂದಿವರ್ಗ ಪೂರ್ಣನಿಷ್ಠೆಯನ್ನು ಹೊಂದಿದ್ದಾರೆ. ಸದಸ್ಯರ ಸಹಕಾರದಿಂದ ಜನತೆಗೆ ಹೆಚ್ಚಿನ ಸೇವೆಯನ್ನು ಮಾಡಲು ಬ್ಯಾಂಕ್ ಕಾತುರವಾಗಿದೆ.

Feb 25th 1994 Hosa Diganta Mahila Bankingnalli Thrivikram Hejje.